ಇದನ್ನು ಮಾಡಬೇಕಾದರೆ, ೯ ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವುದು, ಕೊಲ್ಲೂರು ಹೊಳೆಗೆ ಒಂದು ಸೇತುವೆ ನಿರ್ಮಿಸುವುದು ಹಾಗೂ ೩.೧೦ ಕಿ.ಮೀ. ಉದ್ದಕ್ಕೆ ರಸ್ತೆಯನ್ನು ಕೊಲ್ಲೂರು ಹೊಳೆಯಿಂದ ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಸೇರುವಂತೆ ಮಾಡುವುದು, ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಈ ರಸ್ತೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೊಳಪಡುತ್ತವೆ. ಮೇಲ್ಕಂಡ ಸೇತುವೆಯನ್ನು ಕಟ್ಟುವುದಕ್ಕೂ ಹಾಗೂ ಪೂರಕ ಕಾಮಗಾರಿಗಳನ್ನು ಮಾಡುವುದಕ್ಕೂ ಸುಮಾರು ೧೨೫ ಲಕ್ಷ ರೂ.ಗಳ ಅಂದಾಜು ಬರುತ್ತದೆ. ವಿವರ ಈ ಕೆಳಕಂಡಂತಿದೆ.

ಅ) ಸೇತುವೆ ನಿರ್ಮಾಣಕ್ಕೆ (೧೮೦ ಮೀ. ಉದ್ದ ೭.೫ ಮೀ. ಅಗಲ)	೭೫.೦೦ ಲಕ್ಷ ರೂ.
ಆ) ಸೇತುವೆಯ ಎರಡು ಬದಿ ಕೂಡು ರಸ್ತೆ	೭೫.೦೦ ಲಕ್ಷ ರೂ.
ಇ) ಕೊಲ್ಲೂರು ಹೊಳೆಯಿಂದ ರಾಷ್ಟ್ರೀಯ ರಸ್ತೆ ಸೇರುವ ರಸ್ತೆ ನಿರ್ಮಾಣ	೫.೦೦ ಲಕ್ಷ ರೂ.
ಈ) ನಾವುಂದ-ಬಡಾಕೆರೆ ರಸ್ತೆ ಅಭಿವೃದ್ಧಿ	೧೫.೦೦ ಲಕ್ಷ ರೂ.
ಉ) ಭೂ ಸ್ವಾಧೀನ ಇತ್ಯಾದಿ	೫.೦೦ ಲಕ್ಷ ರೂ.
	೧೨೫.೦೦ ಲಕ್ಷ ರೂ.

ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಈ ಕಾಮಗಾರಿಗಳಿಗೆ ಇಷ್ಟು ಅನುದಾನ ಕೊಡುವ ಸಂದರ್ಭವು ಬಹಳ ಕಡಿಮೆ ಇರುವುದರಿಂದ, ಕೇಂದ್ರ ರಸ್ತೆ ಫಂಡಿನಲ್ಲಿ (ಸಿ.ಆರ್.ಎಫ್) ಈ ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಈ ಬಗ್ಗೆ ವಿವರವಾದ ಅಂದಾಜು ಪಟ್ಟಿಯನ್ನು ತಯಾರು ಮಾಡುವಂತೆ ಮುಖ್ಯ ಇಂಜಿನಿಯರ್, ದಕ್ಷಿಣ ವಲಯದವರಿಗೆ ಈಗಾಗಲೇ ಸೂಚನೆಗಳನ್ನು ಸರ್ಕಾರದಿಂದ ನೀಡಲಾಗಿದೆ.

ದಿನಾಂಕ ೧೬-೬-೯೦ರಂದು ಶಿರಾ ತಾಲ್ಲೂಕು ಎನ್.ಹೆಚ್, 4ನಲ್ಲಿ ದ್ವಾರಾಳು ಊರಿನ ಹತ್ತಿರ ಶ್ರೀ ಚಂದ್ರಹಾಸ ಎನ್ನುವವರು ಲಾರಿ ಹರಿದು ಮೃತಪಟ್ಟಿರುವುದು

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ದಿನಾಂಕ ೧೬-೬-೯೦ರಂದು ಶಿರಾ ತಾಲ್ಲೂಕಿನ ಎನ್‌ಹೆಚ್-೪ನಲ್ಲಿರುವ ದ್ವಾರಾಳು ಊರಿನ ಹತ್ತಿರ ಶ್ರೀ ಚಂದ್ರಹಾಸ ಎಂಬುವವರು ೩೦ ವರ್ಷ ವಯಸ್ಸಾಗಿದ್ದ ಸೈಕಲ್ ಹಿಡಿದು ನಿಂತಿದ್ದು ಸರಿಯಷ್ಟೆ. ಸಾಯಂಕಾಲ ೭ ಗಂಟೆ ಸಮಯದಲ್ಲಿ ದಾರಿಯಲ್ಲಿ ಲಾರಿಯೊಂದು ಚಂದ್ರಹಾಸನ ಮೇಲೆ ಹರಿದು ಚಂದ್ರಹಾಸನು ಸ್ಥಳದಲ್ಲಿಯೇ ಮೃತ ಪಟ್ಟಿದ್ದಾನೆ, ಮತ್ತು ಇಲ್ಲಿಯವರೆಗೂ ಲಾರಿ ಪತ್ತೆಯಾಗಿಲ್ಲ ಮತ್ತು ಲಾರಿಯನ್ನು ಹಿಡಿದಿರುವುದಿಲ್ಲ. ತಾವರೆಕೆರೆ ಪೋಲೀಸರು ಗಮನ ಹರಿಸುತ್ತಿಲ್ಲ. ಆದುದರಿಂದ ಸರಕಾರ ಕೂಡಲೇ ಕ್ರಮ ತೆಗೆದುಕೊಂಡು ಸದರಿ ಲಾರಿಯನ್ನು ಪತ್ತೆ ಹಚ್ಚಬೇಕೆಂದು ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಸದರಿ ಸತ್ತ ವ್ಯಕ್ತಿಯ ಹೆಂಡತಿಯು ಸಧ್ಯ ಗರ್ಭಿಣಿಯಾಗಿದ್ದು ಅಲ್ಲದೆ ಇವರಿಗೆ ಇಪ್ಪರೂ ಮಕ್ಕಳು ಇರುತ್ತವೆ, ಇವರು ಬಹಳ ಬಡ ಕುಟುಂಬದವರಾಗಿದ್ದು ಇವರಿಗೆ ಸರಕಾರದ ವತಿಯಿಂದ ಸೂಕ್ತ ಪರಿಹಾರ ಒದಗಿಸಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

೧೦) ಹುಬ್ಬಳ್ಳಿ ನಗರಸಭೆಯವರು ನಡೆಸುತ್ತಿರುವ ಲ್ಯಾಮಿಂಗ್‌ಟನ್ ಹೈಸ್ಕೂಲಿಗೆ ಸೇರಬಯಸುವ ವಿದ್ಯಾರ್ಥಿಗಳಿಂದ ವಂತಿಗೆ ತೆಗೆದುಕೊಳ್ಳದಿರುವಂತೆ ಒತ್ತಾಯ

ಶ್ರೀ ಪಿ. ಸಿ. ಸಿದ್ದನಗೌಡರ್.—ಹುಬ್ಬಳ್ಳಿ ನಗರದಲ್ಲಿ ನಗರಸಭೆಯವರು ನಡೆಸುತ್ತಿರುವ ಲ್ಯಾಮಿಂಗ್‌ಟನ್ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲು ವಂತಿಗೆಯನ್ನು ಪಡೆಯುವರು ಎಂದು ತಿಳಿದು ಬಂದಿದೆ. ಹುಬ್ಬಳ್ಳಿ ನಗರಸಭೆಯ ಸದಸ್ಯರು ಈ ವಿಚಾರದಲ್ಲಿ ಧರಣಿ ಮಾಡಿದ್ದು ಪತ್ರಿಕೆಯಲ್ಲಿ ಬಂದಿದೆ. ಆದಕಾರಣ ತಕ್ಷಣ ವಂತಿಗೆ ನಿಲ್ಲಿಸಿ ಸಂಬಂಧಪಟ್ಟವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.